ಪಿಡಬ್ಲ್ಯೂಃ 01.

ದಿನಾಂಕಃ 11-07-2018 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಪಿ.ಎನ್ ವಕೀಲರಿಂದಃ

ನಾನು 2001 ನೇ ಇಸ್ವಿಯಲಿ್ಲ ಸೈಂಟಿಸ್್ಟ ಆಗಿ ನಿವೃತ್ತ ಹೊಂದಿರುತ್ತೇನೆ. ನಾನು ಬಿ ಇ ಪದವೀಧರ. 2001 ರಿಂದ 2018 ರವರೆಗೆ ನಾನು ಯಾವುದೇ ಕೆಲಸ ಮಾಡುತ್ತಿಲ್ಲ. ನಾನು ಸರ್ಕಾರದವರು ನೀಡುವಂತಹ ಪಿಂಚಣಿಯಲ್ಲಿ ಜೀವನವನ್ನು ಸಾಗಿಸುತ್ತಿದ್ದೇನೆ. ನಾನು ಹೆಚ್.ಎಸ್.ಆರ್ ಲೇಔಟ್ ನನ್ನ ಪತ್ನಿ, ಮಗ, ಮತ್ತು ಸೂಸೆ ಮತ್ತು ಮೊಮ್ಮಗಳೊಂದಿಗೆ ವಾಸವಾಗಿದ್ದೇನೆ. ನನ್ನ ಪತ್ನಿಯ ಹೆಸರಿನಲ್ಲಿ ಸ್ವಾಲ್ ಸ್ಕೇಲ್ ಇಂಡಸ್ಟ್ರೀ ಬೊಮ್ಮನಹಳ್ಳಿ ಬೆಂಗಳೂರಿನಲ್ಲಿ ಇದೆ. ಅದರ ಹೆಸರು ಆಪ್ರೊ ಎಂಟರ್ ಪ್ರೆಸಸ್. ಸದರಿ ಇಂಡಸ್ಟ್ರೀಯಲ್ಲಿ ನನ್ನ ಹೆಸರು ಮತ್ತು ಪೋನ್ ನಂಬರ್ ಇದೆ. ಅದೇ ರೀತಿ ನನ್ನ ಮಗನ ಹೆಸರು ಮತ್ತು ಪೋನ್ ನಂಬರ್ ಇದೆ. ಸದರಿ ಇಂಡಸ್ಟ್ರೀಯ ವ್ಯವಹಾರಕ್ಕೆ ಸಂಬಂದಪಟ್ಟಂತೆ ನನಗೆ ಸಂಪರ್ಕಿಸಬಹುದ್ದು ಎಂದರೆ ಸರಿ. ನನ್ನ ಮಗ ಹನಿವೆಲ್ ಟೆಕ್ನಾಲಜಿಯಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ. ನನ್ನ ಮಗನ ಆದಾಯವನ್ನು ಹೆಚ್ಚಿಸಲು ಸದರಿ ಇಂಡಸ್ಟ್ರೀ ಪ್ರಾರಂಬಿಸಿದೆವು ಎಂದರೆ ಸರಿಯಲ್ಲಾ. ನನ್ನ ಮಗಳು ಬಿಪಿಟಿ ವರೆಗೆ ವ್ಯಾಸಾಂಗ ಮಾಡಿದ್ದಾರೆ. ಅವರು ಮಡಿಕೇರಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ನನ್ನ ಮಗಳ ಮದುವೆ ಮೇ 2003 ರಲ್ಲಿ ಆಗಿದೆ. ನನ್ನ ಮಗನ ಮದುವೆ 2005 ರಲ್ಲಿ ಆಗಿದೆ. ಈ ಎರಡು ಮದುವೆಯಿಂದ ಸುಮಾರು 15 ರಿಂದ 20 ಲಕ್ಷ ಖರ್ಚು ಮಾಡಿದ್ದೇವೆ. ನನ್ನ ನಿವಉತ್ತಿಯಾಗಿ ಬಂದಂತಹ ಹಣದಿಂದ ಇಬ್ಬರ ಮಕ್ಕಳ ಮದುವೆ ಮಾಡಿದ್ದೇನೆ.

ಪ್ರತಿವಾದಿಯು ನ್ಯಾಯಾವಾದಿಯಾಗಿದ್ದಾರೆ. ನನ್ನ ಮಗಳ ಮದುವೆಯಾದಾಗ ಪ್ರತಿವಾದಿಗೆ ತೋಟ ಇರಲಿಲ್ಲ. ಈಗ ಹಾಲಿ 60 ಎಕರೆ ಕಗ್ಗೋಡದಲ್ಲಿ ಇದೆ ಎಂದರೆ ಸಾಕ್ಷಿಯು ನಿಖರವಾಗಿ ಗೊತ್ತಿಲ್ಲಾ. ಪ್ರತಿವಾದಿ ತಂದೆ ನ್ಯಾಯವಾದಿ ಎಂದರೆ ಸರಿ. ಪ್ರತಿವಾದಿಯ ತಾತ ಎಂ ಎನ್ ಗುಂಡೂರಾವ್ ಎಂದರೆ ಸರಿ. ಅವರು ಮಾ್ಯಜಿಸ್ಟ್ರೇಟ್ ಆಗಿ ಕೊಡಗು ಜಿಲ್ಲೆಯ ಜಿಲ್ಲಾ ಮತ್ತು ಪ್ರದಾನ ನ್ಯಾಯಾದೀಶರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿದ್ದಾರೆ ಎಂದರೆ ಸರಿ. ಅವರ ನೆನಪಿಗೋಸ್ಕರ ಒಂದು ಲೆಔಟ್ ಇದೆ ಎಂದರೆ ಸರಿ. ಪ್ರತಿವಾದಿ ತಂದೆಗೆ ಒಬ್ಬನೇ ಮಗ ಎಂದರೆ ಸರಿ. ಮದುವೆಯಿಂದ ಪ್ರತಿವಾದಿಗೆ ಇಬ್ಬರು ಮಕ್ಕಳು ಎಂದರೆ ಸರಿ. ಹಣಕಾಸಿನ ವಿಚಾರದಲ್ಲಿ ತೊಂದರೆ ಇಲ್ಲ ಎಂದರೆ ಸರಿ. ಮದುವೆಯಾದ ಮೇಲೆ ಇಬ್ಬರ ಕುಟುಂಬದ

ಸಂಬಂಧ ಚೆನ್ನಾಗಿ ಇತ್ತು ಎಂದರೆ ಸರಿ. ಅದೇ ರೀತಿ ಅವರು ನಮ್ಮ ಮನೆಗೆ ಹೋಗದು ನಾವು ಅವರ ಮನೆಗೆ ಹೋಗದು ಮಾಡುತ್ತಿದೇವೆಂದರೆ ಸರಿ. ಸೈಯದ್ ಮಹಮ್ಮದ್ ದಾವಾ ಸ್ವತ್ತಿನ ಮಾರಾಟಗಾರ ಎಂದರೆ ಸರಿ೦ಆ ಅವರಿಗೆ ಯಾವುದೇ ಮಕ್ಕಳಿರಲ್ಲಿ . ಈಗ ಹಾಲೀ ಅವರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಅವರಿಗೆ ಕೈ ಸಾಲ ಇದ್ದು, ವಯಸ್ಸಾಗಿದ್ದು ಜಮೀನನ್ನು ನೋಡಿಕೊಳ್ಳಲಾಗದೇ ಮಾರಿದ್ದಾರೆ. ಸೈಯದ್ ರವರ ಪರಿಚಯ ನನಗೆ ಮತ್ತು ಪ್ರತಿವಾದಿಗೆ ಇರಲಿಲ್ಲ. ಅವರ ಪರಿಚಯ ನಮಗೆ ರಾಜಣ್ಣ ಎಂಬ ದಲ್ಲಾಳಿಯಿಂದ ಆಗಿರುತ್ತದೆ. ಸದರಿ ರಾಜಣ್ಣನವೇ ದಾವಾ ಸ್ವತ್ತಿನ ಕ್ರಯ ಮಾಡಿಸಿದ್ದು, ಮ್ಯೂಟೇಶನ್ ಮಾಡಿಸಿದ್ದು, ಪೋಡಿ, ನಕಾಶೆ ಮತ್ತು ಹಸ್ತಾಂತರ ಮಾಡಿಸಿದ್ದು ಎಂದರ ಸರಿ. ನನಗೆ ಇಂಗ್ಲೀಷಃ್ ಓದಲು ಬರೆಯಲು ಚೆನ್ನಾಗಿ ಬರುತ್ತದೆ. ದಾವೆಯನ್ನು ನಾನೇ ಓದಿ ತಿಳಿದುಕೊಂಡು ಬರೆಯಿಸಿರುತ್ತೇನಿ. ಅದರ ವಿಚಾರರಗಳು ನನಗೆ ಗೊತ್ತು . ವಾದಪತ್ರದ 5 ನೇ ಖಂಡಿಕೆಯಲ್ಲಿ ಮಗಳು ಮತ್ತು ಅಳಿಯನ ಒಳ್ಳೆಯ ಭವಿಷ್ಯಕ್ಕಾಗಿ ಬರೆಸಿದ್ದೇನೆಂದರೆ ಸರಿ. ಆ ಸಮಯದಲ್ಲಿ ನನ್ನ ಅಳಿಯನಿಗೆ ಹಣಕಾಸಿನ ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನಗೆ ಗೊತಿತಲ್ಲಾ ಎಂದಿದ್ದಾರೆ. ಆದ್ದರಿಂದ ಒಳ್ಳೆಯ ವಿಚಾರ ಮನಸ್ಸಿಗೆ ಬಂತಾ ಎಂದರೆ ನನಗೆ ಬಂದಿಲ್ಲ ಎಂದಿದ್ದಾರೆ. ನನ್ನ ಮಗಳ ಮದುವೆಯಾದ 15 ವರ್ಷಗಳ ಕಾಲದಲ್ಲಿ ನನ್ನ ಮಗಳಿಗೆ ಮತ್ತು ಅಳಿಯನಿಗೆ ಆಯಾ ಸಂದರ್ಭ ತಕ್ಕಂತೆ ಉಡುಗೊರೆ ಕೊಟ್ಟಿದ್ದೇವೆ. ಇಲ್ಲಿಯವರೆಗೆ ನಾವು ಅಳಿಯನಿಗೆ ಏನು ಕೊಟ್ಟಿಲ್ಲ ಎಂದರೆ ಸರಿಯಲ್ಲಾ. ಅದೇ ರೀತಿ ನನ್ನ ಮಗಳಿಗೊ ಸಹ ಮದುವೆಯಾದಾಗಿನಿಂದಲೂ ಅವರಿಗೂ ಸಹ ಏನು ತೆಗೆದುಕೊಟ್ಟಿಲ್ಲ ಎಂದರೆ ಸರಿಯಲ್ಲಾ, ನಿವೃತ್ತಿಯಾದ ಕಾರಣ ನನಗೆ ಜೀವನ ಸಾಗಿಸಲು ಕಷ್ಟವಾಗಿದ್ದರಿಂದ ನನ್ನ ಅಳಿಯ ಮತ್ತು ಮಗನಿಗೆ ಏನು ತೆಗೆದುಕೊಟ್ಟಿಲ್ಲ ಎಂದರೆ ಸರಿ.

ನನ್ನ ಅಳಿಯ ಮೂಲತಃ ಕೃಷಿಕ ಮತ್ತು ನ್ಯಾಯವಾದಿಗಳು ಎಂದರೆ ಸಾಕ್ಷಿಯು ಅವರು ನ್ಯಾಯವಾದಿಗಳು ಎಂದಿದ್ದಾರೆ. ಸರ್ಕಾರದಿಂದ ನನ್ನ ಅಳಿಯನಿಗೆ ಉತ್ತಮ ಕೃಷಿಕ ಎಂದು ಸರ್ಕಾರದಿಂದ ಪ್ರಶಸ್ತಿ ಕೊಟ್ಟಿದ್ದಾರೆಂದರೆ ನನಗೆ ಗೊತಿ೦ಲ್ಲಾ ಎಂದಿದ್ದಾರೆ. ನನ್ನ ಮಗಳು ಮತ್ತು ಅಳಿಯ ಜಮೀನನ್ನು ಹೆಚ್ಚಿಗೆ ಮಾಡಬೇಕು ಎಂದು ವಿಚಾರ ಇಟ್ಟಿದ್ದರ ಎಂದರೆ ನನಗೆ ಗೊತ್ತಿಲ್ಲಾ. ಅದೇ ರೀತಿ ಜಮೀನು ಹುಡುಕುತ್ತಿದ್ದರು ಎಂದರೆ ನನಗೆ ಗೊತಿ೦ಲ್ಲಾ. ಕೃಷಿ ಉತ್ಪನ್ನಗಳಿಗೆ ಆದಾಯ ತೆರಿಗೆ ಇಲ್ಲ ಎಂದರೆ ಸರಿ. ಇಂಡಸ್ಟ್ರೀಯಲ್ ಉತ್ಪನ್ನಗಳಿಗೆ ಆದಾಯ ತೆರಿಗೆ ಇದೆ ಎಂದರೆ ಸರಿ.

ತೆರಿಗೆ ತಪ್ಪಿಸುವ ಉದ್ದೇಶದಿಂದ ಇಂಡಸ್ಟ್ರೀಯಲ್ ಉತ್ಪನ್ನದಿಂದ ಬಂದಂತಹ ಹಣವನ್ನು ಜಮೀನಿಗೆ ಹಾಕುವ ಉದ್ದೇಶ ಇಟ್ಟುಕೊಂಡಿದ್ದೇರಿ ಎಂದರೆ ಸರಿಯಲ್ಲಾ. ಸದರಿ ಪ್ರಪೋಜಲ್ ಗೆ ಪ್ರತಿವಾದಿಯು ಒಪ್ಪಿರುತ್ತಾರೆಂದರೆ ಸರಿ. ದಾವಾ ಸ್ವತ್ತು ಪ್ರತಿವಾದಿ ಖರೀದಿ ಮಾಡಿದ್ದು ಮತ್ತು ಉಳಿದಿದ್ದನ್ನು ವಾದಿ ಖರೀದಿ ಮಾಡಿದ್ದರೆಂದರೆ ಸರಿ. ದಾವಾ ಸ್ವತ್ತು ಹುಣಸೂರಿನಲ್ಲಿ ಇದ್ದು, ನಾನು ಬೆಂಗಳೂರಿನಲ್ಲಿ ವಾಸವಾಗಿದ್ದು ಪ್ರತಿವಾದಿ ಮಡಿಕೇರಿಯಲ್ಲಿ ವಾಸವಾಗಿದ್ದಾರೆಂದರೆ ಸರಿ. ದಾವಾ ಸ್ವತ್ತಿಗೆ ಮಡಿಕೇರಿ ಸಮೀಪ ಹಾಗೂ ಬೆಂಗಳೂರಿಗೆ ದೂರ ಎಂದರೆ ಸರಿ. ದಾವಾ ಸ್ವತ್ತು ಪ್ರತಿವಾದಿಗೆ ಹತ್ತಿರವಾಗತ್ತದ ಎಂಬ ಉದೇಶದಿಂದ ಪ್ರತಿವಾದಿ ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲಾ. ನಾನು ಬೆಂಗಳೂರು ವಾಸಿಯಾಗಿದ್ದು ಸುತ್ತಮುತ್ತ ಖರೀದಿ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಹೆಚ್ಚಿನ ಬೆಲೆ ಇತ್ತು ಎಂದಿದ್ದಾರೆ. ದಾವಾದಲ್ಲಿ 5 ಖಂಡಿಕೆಯಲ್ಲಿ ಸ.ನಂಃ 1/112 ರಲ್ಲಿ 3.25 ಎಕರೆ ಎಂದು ನಮೂದು ಮಾಡಿದ್ದಾರೆಂದರೆ ಸರಿ. ಅದೇ ರೀತಿ ಸ.ನಂಃ 1/110 ರಲ್ಲಿ 5-38 ಗುಂಟೆ ನಮೂದು ಮಾಡಿದ್ದೇವೆ ಎಂದರೆ ಸರಿ. ಅದೇ ರೀತಿ ಸ.ನಂಃ 83 ರಲ್ಲಿ 6.33 ಎಕರೆ ನಮೂದು ಮಾಡಿದ್ದೀವಿ ಎಂದರೆ ಸರಿ. ಒಟ್ಟು 14 ಎಕರೆ 99 ಗುಂಟೆ ಎಂದು ನಮೂದು ಮಾಡಿದ್ದೇವೆ ಎಂದರೆ ಸರಿ.

ದಾವಾ ಸ್ವತ್ತನ್ನು ಸ.ನಂಃ 1317 ಮೂರು ಎಕರೆ 13 ಗುಂಟೆ ನಮೂದು ಮಾಡಿದ್ದೀವಿ ಎಂದರೆ ಸರಿ. ಅದೇ ರೀತಿ ಸ.ನಂಃ 88 ರಲ್ಲಿ 9 ಗುಂಟೆ ಮತ್ತು ಸ.ನಂಃ 1318 ರಲ್ಲಿ 5.26 ಎಂದು ನಮೂದು ಮಾಡಿದ್ದೇವೇಂದರೆ ಸರಿ. ಒಟ್ಟು 9 ಎಕರೆ ಚಿಲ್ಲರೆ ಗುಂಟೆ ಇದೆ ಎಂದರೆ ಸರಿ. ದಾವಾ ಸ್ವತ್ತನ್ನು ಪ್ರತಿವಾದಿ ಖರೀದಿ ಮಾಡಿದ್ದು ಉಳಿದ ಸ್ವತ್ತನ್ನು ನಾನು ಖರೀದಿ ಮಾಡಿದ್ದೇನೆಂದೆರ ಸರಿ. ಆರ್. ಎ ಮಂಜುನಾಥ ರವರು ಪರಿಚಯವಿದ್ದು ಅವರು ಪ್ರತಿವಾದಿಯ ಬಾವ ಆಗಬೇಕು. ಅವರ ಪರಿಚಯದಿಂದ ಕಾಲು ಎಕರೆ ಜಾಗವನ್ನು ಖರೀದಿ ಮಾಡಿದ್ದೇವೆಂದರೆ ಸರಿ. ಇಂಡಸ್ಟ್ರೀಗೆ ನೀಡಿದ ಜಾಗವನ್ನು ಇಂಡಸ್ಟ್ರೀಗೆ ಉಪಯೋಗಿಸಬೇಕು ಎಂದರೆ ಸರಿ. ನಾನು ಇಂಡಸ್ಟ್ರೀ ಶೆಡ್ ನ್ನು ತಗೆದುಕೊಂಡು ನಡೆಸುತ್ತಿದ್ದೇನೆ. ಸದರಿ ಕಾಲು ಎಕರೆ ಜಾಗದಲ್ಲಿ ಇಂಡಸ್ಟ್ರೀಯನ್ನು ಕಟ್ಟಿರುವುದಿಲ್ಲ. ಇಂಡಸ್ಟ್ರೀ ಜಾಗ ತೆಗೆದುಕೊಂಡಾಗ ನಿಯಮದಂತೆ ಇಂಡಸ್ಟ್ರೀ ಕಟ್ಟಬೇಕು ಎಂದರೆ ಸರಿ. ದಾವಾ ಖಂಡಿಕೆಯ 13 ರಲ್ಲಿ ಆರ್.ಎನ್ದ ಜೀತೇಂದ್ರ ರವರು ಬ್ಯಾಂಕಿನಿಂದ ಸಾಲ ಪಡೆದಿದ್ದರು ಎಂದರೆ ಸರಿ. ನನಗೆ 60 ವರ್ಷವಾದ

ಕಾರಣ ಬ್ಯಾಂಕಿನಲ್ಲಿ ನನ್ನ ಹೆಸರಿನಲ್ಲಿ ಸಾಲವನ್ನು ಕೊಡುವುದಿಲ್ಲ. ಇಂಡಸ್ಟ್ರೀ ಅಭಿವೃದ್ಧಿ ಮಾಡಲು ನನ್ನ ಮಗನಿಗೆ ಸಾಲ ಬೇಕಾಗಿತ್ತು ಎಂದರೆ ಸರಿಯಲ್ಲಾ. ನನ್ನ ಮಗನ ವೇತನ ಕಡಿಮೆಯಿದ್ದು, ಅವನಿಗೆ ಸಾಲ ಕೊಡುವುದಿಲ್ಲ ಎಂದರೆ ಸರಿ. ಇಂಡಸ್ಟ್ರೀ ಸಲುವಾಗಿ ಸಾಲ ತೆಗೆದುಕೊಂಡರೆ ಶೇಕಡಾ 18 ಬಡ್ಡಿ ಇದೆ ಎಂದರೆ ಸರಿ.

ಕೊಲ್ಯಾಂಟರಲ್ ಸಲುವಾಗಿ ಪ್ರತಿವಾದಿಯು ತನ್ನ ದಾಖಲಾತಿಯನ್ನು ನನಗೆ ಕೊಟ್ಟಿದ್ದಾರೆಂದರೆ ಸರಿಯಲ್ಲಾ. ದಾವಾ 13 ಖಂಡಿಕೆಯಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿರುತ್ತವೆ. ಪ್ರತಿವಾದಿಗಳು ಅವರೇ ಸ್ವತಃ ನನಗೆ ಕೊಟ್ಟಿದ್ದಾರೆಂದರೆ ಸರಿ. ದಾವಾ ಖಂಡಿಕೆ 9 ರಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿವೆ. ದಾವ ಖಂಡಿಕೆ 11 ರಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿವೆ. ನಿಪಿ-23 ನ್ನು ಹಾಜರು ಮಾಡಿದ್ದು ಅದರಲ್ಲಿ ಖಾತೆ ಕ್ಲೋಸ್ ಆಗಿದೆ ಎಂದು ನಮೂದಾಗಿದೆ. ನಿಪಿ-25 ಮತ್ತು 26 ರಲ್ಲಿ ಆಕ್ಸಿಸ್ ಬ್ಯಾಂಕಿನ ಸಾಲವನ್ನು ತೀರಿಸಲು ಸಾಲವನ್ನು ಮಾಡಿದ್ದೆ ಎಂದು ನಮೂದು ಆಗಿದೆ. ನಿಪಿ-24 ರ ಬಗ್ಗೆ ನನಗೆ ಗೊತ್ತಿಲ್ಲಾ. ದಾವಾ ಖಂಡಿಕೆ -11 ರಲ್ಲಿ ದಾವಾ ಸ್ವತ್ತಿನಲ್ಲಿ ವಾಚ್ ಮೆನ್, ಸ್ಟೋರ್ ರೂಮ್ ಮತ್ತು ರೆಸಿಡ್ನೆಯಲ್ ಕ್ವಾಟರ್ಸ್ ಮತ್ತು ವಿದ್ಯುತ್ ಸಂಪರ್ಕವನ್ನು ತೆಗೆದುಕೊಂಡಿದ್ದೇನೆಂದು ಬರೆಸಿದ್ದೇನೆ. ಯವುದೇ ಮನೆ ಕಟ್ಟಬೇಕಾದರೆ ಪಂಚಾಯತಿ ಪರವಾನಗಿ ಇರಬೇಕು ಎಂದರೆ ಸರಿ. ಅದೇ ರೀತಿ ವಿದ್ಯುತ್ ಸಂಪರ್ಕ ತೆಗೆದುಕೊಳ್ಳಬೇಕಾದರೆ ಪರವಾನಗಿ ಬೇಕು ಎಂದರೆ ಸರಿ. ಯಾರ ಹೆಸರಿನಲ್ಲಿ ಆರ್.ಟಿಸಿ ಇರುತ್ತದೆ ಅವರಿಗೆ ಪರವಾನಗಿ ಕೊಡುತ್ತಾರೆಂದರೆ ಸರಿ. ವಿದ್ಯುತ್ ಬಿಲ್ ನಾನು ನೋಡಿಲ್ಲ. ದಾವಾ ಸ್ವತ್ತಿನಲ್ಲಿ ವಾಚ್ ಮೆನ್, ಸ್ಟೋರ್ ರೂಮ್ ಮತ್ತು ರೆಸಿಡ್ನೆಯಲ್ ಕ್ವಾಟರ್ಸ್ ಮತ್ತು ವಿದ್ಯುತ್ ಸಂಪರ್ಕ ಮಾಡಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯ ಮುಂದೆ ಹಾಜರುಪಡಿಸಿದ್ದೇನೆ. ನಾನು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲಾ ಎಂದರೆ ಸರಿಯಲ್ಲಾ. ಸುನಂದಾರವರು ಎಂದರೆ ನನ್ನ ಪತ್ನಿ ಅವರ ತಂದೆಯ ಹೆಸರು ಶ್ರೀರಾಮ್ ಅಯ್ಯಂಗಾರ್ ಮತ್ತು ಅವರು ಕೃಷಿಕರು.

ದಿಃ2-08-2014 ರಂದು ನನಗೆ ಸೈಯದ್ ಅಹಮದರವರಿಂದ ಸ.ನಂಃ 83/2 ರಲ್ಲಿ 1 ಎಕರೆ 32 ಗುಂಟೆ ಖರೀದಿ ಮಾಡಿದ್ದು, ಅದರ ಬಗ್ಗೆ ದೃಢೀಕೃತ ನಕಲು ಪ್ರತಿ ಸಾಕ್ಷಿಗೆ ತೋರಿಸಿ ಸಾಕ್ಷಿ ಒಪ್ಪಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಕ್ರಯಪತ್ರದಂತೆ ನನ್ನ ಹೆಸರಿನಲ್ಲಿ ಖಾತೆ ವರ್ಗಾವಣೆಯಾಗಿದೆ ಎಂದರೆ ಸರಿ. ಸದರಿ ವಿಚಾರವನ್ನು ದಾವೆಯಲ್ಲಿ

ಹೇಳಿದ್ದೀರಾ ಎಂದರೆ ಸಾಕ್ಷಿಯು ಅವಶ್ಯಕತೆ ಇಲ್ಲ ಎಂದಿದ್ದಾರೆ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ ಸದರಿ ವಿಚಾರವನ್ನು ನನ್ನ ವಕೀಲರಿಗೆ ಹೇಳಿದ್ದೇನೆ. ನಿಪಿ-17 ರಲ್ಲಿ ದೂರಿನಲ್ಲಿ ಪ್ರತಿವಾದಿ ವಾಚ್ ಮನ್ ಗೆ ಕೊಲೇ ಬೆದರಿಕೆ ದೂರು ನೀಡಿದ್ದಾರೆಂದರೆ ಸರಿಯಲ್ಲಾ. ದಿಃ 06-08-2017 ರಲ್ಲಿ ವಾಚ್ ಮನ್ ಗೆ ಪ್ರಾಣ ಭಯ ನೀಡಿರುವ ಬಗ್ಗೆ ಅದೇ ದಿನ ದೂರನ್ನು ನೀಡಿರುವುದಿಲ್ಲ. ದಿಃ 26-05-2017 ರಂದು ಪ್ರತಿವಾದಿ ಪ್ರಾಣ ಭಯ ಹಾಕಿರುವ ಬಗ್ಗೆ ಪಿರ್ಯಾದಿಯನ್ನು ನೀಡಿರುವ ಬಗ್ಗೆ ಪೋಲೀಸ್ ಠಾಣೆಗೆ ದೂರನ್ನು ದಾಖಲು ಮಾಡಿ ಅದರ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸಾಕ್ಷಿ ಮುಂದುವರೆದು ಡಿ ವೈ ಎಸ್ ಪಿ ರವರಿಗೆ ದೂರು ಕೊಟ್ಟಿದ್ದೇನೆ.

ಈ ಹಂತದಲ್ಲಿ ಮುಂದಿನ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕೋರಿಕೆ ಮೇರೆಗೆ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.